FEBRUARY 14, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

ವಿಜಯನಗರ ಜಿಲ್ಲೆ, ಹಂಪಿಯಲ್ಲಿ, ಮೂರು ದಿನಗಳ, ವೈಭವದ ಹಂಪಿ ಉತ್ಸವಕ್ಕೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಚಾಲನೆ.

ಜನಸೇವೆಯಲ್ಲಿ ಸಾರ್ಥಕ ಸಾವಿರ ದಿನ ಧ್ಯೇಯದ, ಸಾಧನಾ ಸಮಾವೇಶ; ಹಾವೇರಿಯಲ್ಲಿ ಇಂದು, 1 ಲಕ್ಷದ 6 ಸಾವಿರ ಫಲಾನುಭವಿಗಳಿಗೆ, ಹಕ್ಕು ಪತ್ರ.

ಯಾದಗಿರಿ ಜಿಲ್ಲೆಯಾದ್ಯಂತ, ಕಳೆದ ಮೂರು ವ ರ್ಗಳಲ್ಲಿ 102 ಬಾಲ ಹಾಗೂ ಕಿಶೋರ ಕಾರ್ಮಿಕರು ಪತ್ತೆ.

ಪ್ರಧಾನಮಂತ್ರಿ ಶ್ರಮಯೋಗಿ ಮಾನಧನ ಯೋಜನೆ; ಚಾಮರಾಜನಗರ ಜಿಲ್ಲೆಯ, ಅಸಂಘಟಿತ ವಲಯದ ಕಾರ್ಮಿಕರಿಗೆ, ಸಮಾಜಿಕ ಭದ್ರತೆ.

<><><>

ಈಗ ವಾರ್ತೆಗಳ ವಿವರ

<><><>

ವಿಜಯನಗರ ಸಾಮ್ರಾಜ್ಯದ ವೈಭವ, ಇತಿಹಾಸವನ್ನು ಜನರಿಗೆ ತಿಳಿಸುವ ಉದ್ದೇಶದಿಂದ, ಹಿಂದಿನಂತೆ, ನವೆಂಬರ್ 3, 4 ಮತ್ತು 5 ರಂದು, ಹಂಪಿ ಉತ್ಸವ ನಡೆಸಲು, ರಾಜ್ಯ ಸರ್ಕಾರ ತೀರ್ಮಾನಿಸಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದ್ದಾರೆ. ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕು, ಐತಿಹಾಸಿಕ ಹಂಪಿಯ, ಗಾಯತ್ರಿ ಪೀಠದ ಬಳಿ, ಎಂ.ಪಿ ಪ್ರಕಾಶ ವೇದಿಕೆಯಲ್ಲಿ, ಮೂರು ದಿನಗಳ, ಹಂಪಿ ಉತ್ಸವಕ್ಕೆ, ತಾಯಿ ಭುವನೇಶ್ವರಿಗೆ ಪೂಜೆ ಸಲ್ಲಿಸಿ, ಚಾಲನೆ ನೀಡಿದರು. ಫೆಬ್ರುವರಿ ತಿಂಗಳಲ್ಲಿ, ಪರೀಕ್ಷೆಗಳು ನಡೆಯುವುದರಿಂದ, ಈ ವರ್ಷದ ನವೆಂಬರ್ ಮೊದಲ ವಾರದಲ್ಲಿ, ಹಂಪಿ ಉತ್ಸವ ಆಯೋಜಿಸಲಾಗುವುದು ಎಂದರು.

<><><>

ಸಿ.ಎಂ ಸಿದ್ದರಾಮಯ್ಯ ಧ್ವನಿ– 34 ಸೆಕೆಂದುಗಳು

<><><>

ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ, ಶಿವರಾಜ ತಂಗಡಗಿ ಮಾತನಾಡಿ, 1970 ರಲ್ಲಿ ಆರಂಭಗೊಂಡ ಹಂಪಿ ಉತ್ಸವಕ್ಕೆ, 1997 ರಲ್ಲಿ ಮುತ್ಸದ್ದಿ ಎಂ.ಪಿ. ಪ್ರಕಾಶ ಅವರು, ವಿಶೇ ' ಮೆರುಗು ತಂದರು ಎಂದರು. ಹಂಪಿ ಉತ್ಸವದಲ್ಲಿ, ಪ್ರಥಮ ಬಾರಿಗೆ ಆಯೋಜಿಸಿದ್ದ, ಡ್ರೋನ್ ಶೋದಲ್ಲಿ, ಡ್ರೋನ್‌ಗಳು ಬಾನಂಗಳದಲ್ಲಿ ಕಲ್ಲಿನ ರಥ, ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನ ಸೇರಿದಂತೆ, ಹಂಪಿಯ ಐತಿಹಾಸಿಕ ಸ್ಮಾರಕಗಳ ಸುಂದರ ಚಿತ್ತಾರ ಮೂಡಿಸಿದವು.

<><><>

ಹಂಪಿ ಉತ್ಸವದ ಅಂಗವಾಗಿ ಇಂದು, ಹಂಪಿ ಸಮೀಪದ ವಿದ್ಯಾರಣ್ಯ ಪೀಠದ ಹೈಸ್ಕೂಲ್ ಮೈದಾನದಲ್ಲಿ ಕುಸ್ತಿ, ಗುಂಡು ಮತ್ತು ಚೀಲ ಎತ್ತುವುದು ಹಾಗೂ ಇತರೆ ಗ್ರಾಮೀಣ ಕ್ರೀಡಾ ಸ್ಪರ್ಧೆಗಳು ಜರುಗಲಿವೆ. ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದ ವೇದಿಕೆಯಲ್ಲಿ, ಕವಿಗೋಷ್ಠಿ ಮತ್ತು ಹೊಸಪೇಟೆಯ ವಿಜಯನಗರ ಕಾಲೇಜು ಮೈದಾನದಲ್ಲಿ, ಗಾಳಿಪಟ ಉತ್ಸವ ನಡೆಯಲಿವೆ. ಶ್ರೀ ಕೃ ್ಣದೇವರಾಯ ವೇದಿಕೆಯಲ್ಲಿ ಎಂ.ಡಿ ಪಲ್ಲವಿ ಮತ್ತು ತಂಡದಿಂದ, ಸಂಗೀತ ಕಾರ್ಯಕ್ರಮ ಹಾಗೂ ವಿರೂಪಾಕ್ಷೇಶ್ವರ ವೇದಿಕೆಯಲ್ಲಿ ಬ್ಯಾಂಡ್ ಸಂಗೀತದ ರಸದೌತಣವಿರಲಿದೆ.

<><><>

ಹಾವೇರಿಯ ಅಜ್ಜಯ್ಯನ ಗುಡಿ ಆವರಣದಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ, ಜನ ಸೇವೆಯಲ್ಲಿ ಸಾರ್ಥಕ ಸಾವಿರ ದಿನ ಧ್ಯೇಯದೊಂದಿಗೆ, ರಾಜ್ಯ ಸರ್ಕಾರ, ಸಾಧನಾ ಸಮಾವೇಶ ಹಾಗೂ ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶ ಆಯೋಜಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಕಂದಾಯ ಖಾತೆ ಸಚಿವ ಕೃಷ್ಣ ಬೈರೇಗೌಡ ಹಾಗೂ ಹಾವೇರಿ ಜಿಲ್ಲೆ ಉಸ್ತುವಾರಿ ಸಚಿವ ಶಿವಾನಂದಗೌಡ ಪಾಟೀಲ ಸೇರಿದಂತೆ, ರಾಜ್ಯ ಸಚಿವ ಸಂಪುಟದ ಹಿರಿಯ ಸಚಿವರುಗಳು, ಸಾಧನಾ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದಲ್ಲಿ ಜನರು ಪಾಲ್ಗೊಳ್ಳಲು ಅನುವಾಗುವಂತೆ, ಜಿಲ್ಲೆಯಾದ್ಯಂತ 175 ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ.

<><><>

ಹಾವೇರಿಯಲ್ಲಿ ಇಂದು ಆಯೋಜಿತ, ಜನ ಸೇವೆಯಲ್ಲಿ ಸಾರ್ಥಕ ಸಾವಿರ ದಿನ, ಸಾಧನಾ ಸಮಾವೇಶದಲ್ಲಿ, 1 ಲಕ್ಷದ 6 ಸಾವಿರ ಹಕ್ಕುಪತ್ರಗಳನ್ನು, ವಿತರಿಸಲಾಗುವುದು ಎಂದು, ಕಂದಾಯ ಖಾತೆ ಸಚಿವ, ಕೃ ್ಣ ಬೈರೇಗೌಡ ತಿಳಿಸಿದ್ದಾರೆ. ಗದಗ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಕಂದಾಯ ಇಲಾಖೆ ಪ್ರಗತಿ ಪರಿಶೀಲಿಸಿ, ಅವರು ಮಾತನಾಡಿದರು. 1 ಲಕ್ಷ 90 ಸಾವಿರ ರೈತರ ಭೂಮಿ ಪೋಡಿ ಪ್ರಗತಿಯಲ್ಲಿದೆ. 14 ಲಕ್ಷ 48 ಸಾವಿರದ 536 ಸರ್ವೇ ನಂಬರ್‌ಗಳ ಪೋತಿ ಖಾತೆ ಪುರಸ್ಕರಿಸಿ, ಪೂರ್ಣಗೊಳಿಸಲಾಗಿದೆ. 67 ಕೋಟಿಗೂ ಅಧಿಕ ದಾಖಲೆಗಳನ್ನು ಸ್ಕ್ಯಾನಿಂಗ್ ಮೂಲಕ, ಡಿಜಿಟಲೀಕರಣ ಗೊಳಿಸಲಾಗಿದೆ. ಲ್ಯಾಂಡ್ ಬೀಟ್ ಮೂಲಕ, ಶೇಕಡ 96 ರಷ್ಟು ಸರ್ಕಾರಿ ಆಸ್ತಿಗಳಿಗೆ, ಜಿಯೋ ಫೆನ್ಸಿಂಗ್ ಕೈಗೊಳ್ಳಲಾಗಿದೆ. 22 ಕೋಟಿ 15 ಲಕ್ಷ ಆಸ್ತಿಗಳಿಗೆ ಆಧಾರ್ ಜೋಡಣೆ ಮಾಡಲಾಗಿದೆ. ಹಾವೇರಿಯಲ್ಲಿ ಕಾವೇರಿ ತಂತ್ರಾಂಶ 2.0 ನೋಂದಣಿಯಲ್ಲಿ, ಸುಧಾರಣೆ ತರಲಾಗಿದೆ ಎಂದರು. ರಾಜ್ಯ ಸರ್ಕಾರ 6 ಸಾವಿರದ ಐನೂರು ಹಳ್ಳಿಗಳನ್ನು, ಕಂದಾಯ ಗ್ರಾಮಗಳಾಗಿ ಘೋಷಿಸುವ ಗುರಿ ಹೊಂದಿದೆ ಎಂದ, ಸಚಿವ ಕೃಷ್ಣ ಬೈರೇಗೌಡ, ರಾಜ್ಯದ 2 ಲಕ್ಷ 20 ಸಾವಿರ ಕುಟುಂಬಗಳಿಗೆ, ಹಕ್ಕುಪತ್ರಗಳನ್ನು ನೀಡಲು, ಯೋಜಿಸಿದೆ ಎಂದು, ಮಾಹಿತಿ ನೀಡಿದರು.

<><><>

ಕಲಬುರಗಿ ಜಿಲ್ಲೆ, ಅಫಜಲಪುರ ತಾಲೂಕು, ದೇವಲ ಗಾಣಗಾಪುರ ಹಾಗೂ ಶ್ರೀ ದತ್ತ ದೇಗುಲದ ಸಮಗ್ರ ಅಭಿವೃದ್ಧಿಗೆ, ಕೇಂದ್ರ ಸರ್ಕಾರವನ್ನು ಕೋರಿ, 'ಪ್ರಸಾದ' ಯೋಜನೆ ಅಡಿ, 83 ಕೋಟಿ 52 ಲಕ್ಷ ರೂಪಾಯಿ, ಕ್ರಿಯಾ ಯೋಜನೆ ರೂಪಿಸಿ, ಪ್ರಸ್ತಾವ ಸಲ್ಲಿಸಲಾಗಿದೆ ಎಂದು, ಮುಜರಾಯಿ ಖಾತೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ. ಶ್ರೀ ತಂತುಕೇಶ್ವರ ದೇವಸ್ಥಾನದ, ಅನ್ನದಾಸೋಹ ಭವನಕ್ಕೆ, ಶಿಲಾನ್ಯಾಸ ನೆರವೇರಿಸಿ, ಮಾತನಾಡಿದ ಸಚಿವರು, ಮುಂಬರುವ 3 ತಿಂಗಳಲ್ಲಿ, ಘತ್ತರಗಿ ಶ್ರೀ ಭಾಗಮ್ಮಾ ದೇವಿ ದೇವಸ್ಥಾನದ, ನವೀಕರಣಕ್ಕೆ, 40 ಕೋಟಿ ರೂಪಾಯಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ, ಚಾಲನೆ ನೀಡಲಾಗುವುದು ಎಂದರು. ಅನ್ನದಾಸೋಹ ಭವನಕ್ಕೆ 2 ಕೋಟಿ ರೂಪಾಯಿ ದಾನ ನೀಡಲು ನಿರ್ಧರಿಸಿದ, ವಿಜಯವಾಡಾದ, ಶ್ರೀನಿವಾಸ ಹಾಗೂ ಸುಕುಮಾರಿ ಕೊನೇರು ದಂಪತಿಯನ್ನು, ಸಚಿವರು ಅಭಿನಂದಿಸಿದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(40 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಯಾದಗಿರಿ ಜಿಲ್ಲೆಯಾದ್ಯಂತ, ಕಳೆದ ಮೂರು ವರ್ಷಗಳಲ್ಲಿ 102 ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ಪತ್ತೆ ಹಚ್ಚಲಾಗಿದೆ ಎಂದು, ಜಿಲ್ಲಾಧಿಕಾರಿ ಹರ್ಷಲ್ ಭೋಯರ ತಿಳಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸಾಯಿಟಿ ಪ್ರಗತಿ ಪರಿಶೀಲಿಸಿ, ಮಾತನಾಡಿದ ಅವರು, ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ನೇಮಕ ಮಾಡಿಕೊಂಡ ಆರೋಪಿಗಳಿಂದ, 4 ಲಕ್ಷದ 59 ಸಾವಿರ ರೂಪಾಯಿ ದಂಡ ವಸೂಲಿಸಿ, 73 ಪ್ರಕರಣಗಳನ್ನು ದಾಖಲಿಸಲಾಗಿದೆ. ಆ ಪೈಕಿ, 23 ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣ ಪ್ರಕಟವಾಗಿದೆ ಎಂದರು.

<><><>

ಶಿಕ್ಷಣ ಹಕ್ಕು ಕಾಯ್ದೆ 2009, ಸಮಗ್ರ ಹಾಗೂ ಪರಿಣಾಮಕಾರಿ ಅನುಷ್ಠಾನಕ್ಕಾಗಿ, ಸಂಬಂಧಿತ ಎಲ್ಲ ಇಲಾಖೆಗಳ ಅಧಿಕಾರಿಗಳು, ಕಾಯ್ದೆಯ ಅಧ್ಯಯನ ಕೈಗೊಳ್ಳುವಂತೆ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ ಸೂಚಿಸಿದ್ದಾರೆ. ಯಾದಗಿರಿ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ಮಕ್ಕಳ ಅನುಪಾಲನಾ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಆಯೋಜಿಸಿದ್ದ, ಉಚಿತ ಮತ್ತು ಕಡ್ಡಾಯ ಶಿಕ್ಷಣ ಅರಿವು ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿದರು. ಶಿಕ್ಷಣ ಹಕ್ಕು ಕಾಯ್ದೆ – ಆರ್.ಟಿ.ಇ. ಕೇವಲ ಶಾಲಾ ಪ್ರವೇಶಕ್ಕೆ ಸೀಮಿತವಾಗಬಾರದು. ಫಲಾನುಭವಿ ವಿದ್ಯಾರ್ಥಿಗಳಿಗೆ, ಸಕಾಲಿಕವಾಗಿ ಸೌಲಭ್ಯಗಳು, ಸಮರ್ಪಕವಾಗಿ ದೊರೆಯುವಂತೆ, ಅಧಿಕಾರಿಗಳು ಯೋಜಿಸಬೇಕು ಎಂದರು.

<><><>

ಜಲ ಜೀವನ ಮಿಷನ್ ಯೋಜನೆ ಅಡಿ, ವಿಜಯಪುರ ಜಿಲ್ಲೆಯಲ್ಲಿ, ಗ್ರಾಮೀಣ ಭಾಗದ ಜನವಸತಿಗಳಿಗೆ, ದಿನವೊಂದಕ್ಕೆ, ಸರಾಸರಿ ತಲಾ 55 ಲೀಟರ್ ನೀರು, ಪೂರೈಸಲು, ಯೋಜಿಸಲಾಗಿದೆ ಎಂದು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ, ಕಾರ್ಯಪಾಲಕ ಅಭಿಯಂತರ, ಸಂಜಯ ಕೋಟೆಣ್ಣವರ ತಿಳಿಸಿದ್ದಾರೆ. ಆಲಮಟ್ಟಿ ಹಾಗೂ ನಾರಾಯಣಪುರ ಜಲಾಶಯದ ಹಿನ್ನೀರನ್ನು ಶುದ್ಧೀಕರಿಸಿ, ಪೂರೈಕೆ ಮಾಡಲಾಗುವುದು ಎಂದು, ಅವರು ಹೇಳಿದ್ದಾರೆ.

<><><>

ಸಂಜಯ ಕೋಟೆಣ್ಣವರ ಧ್ವನಿ– 36 ಸೆಕೆಂದುಗಳು

<><><>

ಪ್ರಧಾನಮಂತ್ರಿ ಶ್ರಮಯೋಗಿ ಮಾನಧನ ಯೋಜನೆ ಅಡಿ, ಅಸಂಘಟಿತ ಕಾರ್ಮಿಕರಿಗೆ ಸಮಾಜಿಕ ಭದ್ರತೆ ಒದಗಿಸಲಾಗುತ್ತಿದೆ ಎಂದು, ಚಾಮರಾಜನಗರ ಜಿಲ್ಲಾಧಿಕಾರಿ ಶ್ರೀರೂಪಾ ತಿಳಿಸಿದ್ದಾರೆ. ಜಿಲ್ಲಾಡಳಿತ ಭವನದಲ್ಲಿ, ಪ್ರಧಾನಮಂತ್ರಿ ಶ್ರಮಯೋಗಿ ಮಾನಧನ ಯೋಜನೆಯಡಿ, ಪಿಂಚಣಿಗೆ ಅರ್ಹ ಫಲಾನುಭವಿಗಳನ್ನು ನೋಂದಾಯಿಸಲು, ಅವರು ಪೂರ್ವಭಾವಿ ಸಭೆ, ನಡೆಸಿದರು. ಕಾರ್ಮಿಕರು, ಶ್ರಮಿಕರು, ತಮ್ಮ ಜೀವನದ ಸಂಧ್ಯಾ ಕಾಲದಲ್ಲಿ, ಪೋಷಿಸಿಕೊಳ್ಳಲು ನೆರವಾಗುವ, ಯೋಜನೆ ಅಡಿ, ಗೃಹ ಆಧಾರಿತ ಕಾರ್ಮಿಕರು, ಬೀದಿಬದಿ ವ್ಯಾಪಾರಿಗಳು, ಬಿಸಿಯೂಟ ಸಿದ್ಧಪಡಿಸುವವರು, ಭಾರ ಹೊರುವವರು, ಇಟ್ಟಿಗೆ ಭಟ್ಟಿ ಕಾರ್ಮಿಕರು, ಚಮ್ಮಾರರು, ಚಿಂದಿ ಆಯುವವರು, ಮನೆ ಕೆಲಸದವರು, ರಿಕ್ಷಾ ಚಾಲಕರು ಸೇರಿದಂತೆ, ಅಸಂಘಟಿತ ವಲಯದ ಕಾರ್ಮಿಕರಿಗೆ, ಸಾಮಾಜಿಕ ಭದ್ರತೆ ಕಲ್ಪಿಸಲು ಜನ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ವಿಜಯನಗರ ಜಿಲ್ಲೆ, ಹಂಪಿಯಲ್ಲಿ, ಮೂರು ದಿನಗಳ, ವೈಭವದ ಹಂಪಿ ಉತ್ಸವಕ್ಕೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಚಾಲನೆ.

ಜನಸೇವೆಯಲ್ಲಿ ಸಾರ್ಥಕ ಸಾವಿರ ದಿನ ಧ್ಯೇಯದ, ಸಾಧನಾ ಸಮಾವೇಶ; ಹಾವೇರಿಯಲ್ಲಿ ಇಂದು, 1 ಲಕ್ಷದ 6 ಸಾವಿರ ಫಲಾನುಭವಿಗಳಿಗೆ, ಹಕ್ಕು ಪತ್ರ.

ಪ್ರಧಾನಮಂತ್ರಿ ಶ್ರಮಯೋಗಿ ಮಾನಧನ ಯೋಜನೆ; ಚಾಮರಾಜನಗರ ಜಿಲ್ಲೆಯ, ಅಸಂಘಟಿತ ವಲಯದ ಕಾರ್ಮಿಕರಿಗೆ, ಸಮಾಜಿಕ ಭದ್ರತೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>